## ನಿವೇದನೆ

# ಉರಿವ ಸೂರ್ಯ ಕುದಿವ ಮನುಷ್ಯರ ನಡುವೆ...

ಜನಸಾಮಾನ್ಯರ ಪಾಲಿಗೆ ದುಃಸ್ವಪ್ನ ಆಗಿರುವ ಬರ, ಅಧಿಕಾರಶಾಹಿಯ ಪಾಲಿಗೆ ರಮಣೀಯವಾಗಿರುತ್ತದೆ. ಕುಡಿಯುವ ನೀರು, ಜಾನುವಾರುಗಳಿಗೆ ಮೇವು, ಕೆರೆಗಳ ಹೂಳೆತ್ತುವುದು – ಎಲ್ಲವೂ 'ಪರ್ಸೆಂಟೇಜ್ ಯೋಜನೆ'ಗಳಾಗಿರುವುದು ಎಲ್ಲರಿಗೂ ಗೊತ್ತಿರುವ ಗುಟ್ಟು.

ಕಳೆದ 18 ವರ್ಷಗಳಲ್ಲಿ ಕರ್ನಾಟಕ 15 ಬರಗಾಲಗಳನ್ನು ಎದುರಿಸಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೃಷ್ಣ ಬೈರೇಗೌಡರು ನೀಡಿರುವ ಈ ಅಂಕಿಅಂಶಗಳ ಹಿನ್ನೆಲೆಯಲ್ಲಿ, ಹೆಚ್ಚೂಕಡಿಮೆ ಎರಡು ದಶಕಗಳಿಂದ ಕರ್ನಾಟಕ ಬರದ ದವಡೆಯಲ್ಲಿ ನರಳುತ್ತಿದೆ ಎಂದಾಯಿತು. ಪ್ರಸಕ್ತ ವರ್ಷವೂ ರಾಜ್ಯದ ಸುಮಾರು 160 ತಾಲ್ಲೂಕುಗಳಲ್ಲಿ ಬರದ ತಾಂಡವ ಮುಂದುವರೆದಿದೆ. ಕರ್ನಾಟಕ ಮಾತ್ರವಲ್ಲ, 'ದೇಶದ ಶೇ. 50ರಷ್ಟು ಭಾಗ ಬರಪೀಡಿತವಾಗಿದೆ' ಎನ್ನುವುದು 'ಐಐಟಿ' (ಭಾರತೀಯ ತಂತ್ರಜ್ಞಾನ ಸಂಸ್ಥೆ) ವಿಜ್ಞಾನಿಗಳ ಅಧ್ಯಯನದ ಮುಖ್ಯಾಂಶ. ಕರ್ನಾಟಕದೊಂದಿಗೆ ಅರುಣಾಚಲ ಪ್ರದೇಶ, ಜಾರ್ಖಂಡ್, ಆಂಧ್ರಪ್ರದೇಶ, ಗುಜರಾತ್, ತಮಿಳುನಾಡುಗಳು ಬರದ ನಕಾಶೆಯಲ್ಲಿ ಎದ್ದುಕಾಣುತ್ತಿವೆ.

ಬೇಸಿಗೆಯ ಧಗೆಯೊಂದಿಗೆ ಬರವೂ ತೀವ್ರಗೊಳ್ಳುತ್ತಿರುವ ಸಂದರ್ಭದಲ್ಲೇ ಗಡಿಯಲ್ಲಿ ಸಂಘರ್ಷದ ಕಾವೂ ಹೆಚ್ಚಿದೆ. ಬಂಡೀಪುರದ ಕಾಡಿನಲ್ಲಿ ಕಾಣಿಸಿದ ಕಾಳ್ಗಿಚ್ಚು ಸಾವಿರಾರು ಹೆಕ್ಟೇರ್ ಕಾಡನ್ನು ಕಬಳಿಸಿದ ನಂತರ ಸದ್ಯಕ್ಕೆ ಶಮನಗೊಂಡಿದ್ದರೂ ಬೇಸಗೆಯ ಕೆನ್ನಾಲಗೆ ಯಾವ ಕ್ಷಣದಲ್ಲಾದರೂ ಉರಿಯನ್ನು ಜಾಗೃತಗೊಳಿಸಬಹುದು. ಕಾಳ್ಗಿಚ್ಚಿಗೆ ಸಂಬಂಧಿಸಿದಂತೆ ಪ್ರಕೃತಿಗಿಂತಲೂ ಮನುಷ್ಯರ ಕೈವಾಡವೇ ಹೆಚ್ಚೆನ್ನುವುದು ಪರಿಸರ ತಜ್ಞರು ಕಂಡುಕೊಂಡಿರುವ ಸತ್ಯ. ಒಂದೆಡೆ ಪ್ರಾಕೃತಿಕ ವಿಕೋಪದಿಂದ ಉಂಟಾದ ಬರ, ಇನ್ನೊಂದೆಡೆ ಗಡಿ ಸಂಘರ್ಷ ಹಾಗೂ ಕಾಡಿನಲ್ಲಿ ಬೆಂಕಿಯ ಮಾನವ ನಿರ್ಮಿತ ಕಿಚ್ಚುಗಳು ಸೇರಿಕೊಂಡು ಈ ಬಾರಿಯ ಬೇಸಿಗೆ ನಾಡು–ದೇಶದ ಪಾಲಿಗೆ ಘಾತಕವಾಗಿ ಪರಿಣಮಿಸಿದೆ. ಕಳೆದ ಐದು ವರ್ಷಗಳಲ್ಲಿ ಸುಮಾರು 36 ಸಾವಿರ ಹೆಕ್ಟೇರ್ ಪ್ರದೇಶದಲ್ಲಿನ ಕಾಡು ಕರ್ನಾಟಕದಲ್ಲಿ ಕಾಳ್ಗಿಚ್ಚಿಗೆ ಬಲಿಯಾಗಿದೆ ಎನ್ನುವ ಅಂದಾಜಿದೆ. ಚಾಮರಾಜನಗರ, ಮೈಸೂರು, ಬೆಳಗಾವಿ, ಕೊಡಗು, ದಕ್ಷಿಣ ಕನ್ನಡ, ಉತ್ತರಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿನ ಕಾಡುಗಳಲ್ಲಿ ಪ್ರತಿ ವರ್ಷ ಬೆಂಕಿ ಬೀಳುವುದು ಸಾಮಾನ್ಯವಾಗಿದ್ದು, ಆ ಪ್ರಕರಣಗಳಲ್ಲಿ ಬಿಸಿಲಿಗಿಂತಲೂ ಮಾನವರ ಹಸ್ತಕ್ಷೇಪವೇ ಎದ್ದುಕಾಣುತ್ತಿದೆ.


ಕೃಷಿಯ ಮಾತಿರಲಿ, ಕುಡಿಯುವ ನೀರಿಗೂ ತತ್ವಾರ ಉಂಟಾಗಿರುವ ಸಂದರ್ಭವಿದು. ಅಂತರ್ಜಲ ಬಳಕೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದರೂ, ನೀರಿನ ಮರುಪೂರಣದ ಪ್ರಯತ್ನಗಳು ತೀರಾ ನಿರಾಶಾದಾಯಕವಾಗಿವೆ. ನೀರಿನ ಸಮೀಕರಣದ ವ್ಯತ್ಯಾಸದಿಂದಾಗಿ ಬರದ ತೀವ್ರತೆ ಹೆಚ್ಚುತ್ತಿದೆ ಎನ್ನುವ ವಿಜ್ಞಾನಿಗಳ ಆತಂಕವನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಬರದಿಂದಾಗಿ ಅತಿ ಹೆಚ್ಚು ತೊಂದರೆಗೆ ಒಳಗಾಗುವುದು ಬಡವರು ಹಾಗೂ ಸಣ್ಣ ರೈತರು. ನೀರು, ಆಹಾರವಿಲ್ಲದೆ ತೊಂದರೆಗೊಳಗಾಗುವ ಪ್ರಾಣಿ–ಪಕ್ಷಿಗಳ ಪಾಡಂತೂ ಅತಿ ಘೋರ. ಇಂಥ ಸಂದರ್ಭದಲ್ಲಿ ನೀರಿನ ಬಳಕೆಯ ಕುರಿತಂತೆ ಸಮಾಜದಲ್ಲಿ ಎಚ್ಚರ ಮೂಡದಿದ್ದರೆ ನಾಳೆಗಳು ಮತ್ತಷ್ಟು ಅಸಹನೀಯವಾಗಲಿವೆ. ಈ ಅಪಾಯವನ್ನು ಮನಗಂಡೇ ಕರ್ನಾಟಕ ಸರ್ಕಾರ 2019ನ್ನು 'ಜಲ ವರ್ಷ' ಎಂದು ಘೋಷಿಸಿದೆ. 'ಜಲಾಮೃತ' ಹೆಸರಿನಲ್ಲಿ ನೀರಿನ ಸಂರಕ್ಷಣೆಗೆ ಚಳವಳಿಯನ್ನು ರೂಪಿಸಲು ಉದ್ದೇಶಿಸಿದೆ. ನೀರಿನ ಅಗತ್ಯ, ಸದ್ಬಳಕೆ ಹಾಗೂ ಹಸಿರೀಕರಣದ ಕುರಿತು 'ಜಲಾಮೃತ' ಯೋಜನೆಯಲ್ಲಿ ಜನಜಾಗೃತಿ ಮೂಡಿಸುವುದು ಸರ್ಕಾರದ ಉದ್ದೇಶ ಸ್ವಾಗತಾರ್ಹ. ಇನ್ನೆರಡು ವರ್ಷಗಳಲ್ಲಿ 14 ಸಾವಿರ ಜಲಮೂಲಗಳನ್ನು ರಾಜ್ಯದಲ್ಲಿ ಜಾಗೃತಗೊಳಿಸಲಾಗುವುದು ಎಂದು ಹೇಳಲಾಗುತ್ತಿದೆ. 'ಜಲ ವರ್ಷ'ದ ಈ ಎಲ್ಲ ಯೋಜನೆಗಳು ಆಕರ್ಷಕವಾಗಿವೆ. ಆದರೆ, ಅವು ಎಷ್ಟರಮಟ್ಟಿಗೆ ಅನುಷ್ಠಾನಗೊಳ್ಳುತ್ತವೆ ಎನ್ನುವುದರ ಮೇಲೆ ಯೋಜನೆಯ ಯಶಸ್ಸು ನಿರ್ಧಾರವಾಗುತ್ತದೆ.

ಜನಸಾಮಾನ್ಯರ ಪಾಲಿಗೆ ದುಃಸ್ವಪ್ನ ಆಗಿರುವ ಬರ, ಅಧಿಕಾರಶಾಹಿಯ ಪಾಲಿಗೆ ರಮಣೀಯವಾಗಿರುತ್ತದೆ. ಕುಡಿಯುವ ನೀರು, ಜಾನುವಾರುಗಳಿಗೆ ಮೇವು, ಕೆರೆಗಳ ಹೂಳೆತ್ತುವುದು – ಎಲ್ಲವೂ 'ಪರ್ಸೆಂಟೇಜ್ ಯೋಜನೆ'ಗಳಾಗಿರುವುದು ಎಲ್ಲರಿಗೂ ಗೊತ್ತಿರುವ ಗುಟ್ಟು. ಇತ್ತೀಚೆಗೆ ವಿಜಯಪುರ ಜಿಲ್ಲೆಗೆ ಬರ ವೀಕ್ಷಣೆಗೆಂದು ಬಂದಿದ್ದ ಅಧಿಕಾರಿಯೊಬ್ಬರು ಸೆಲ್ಫಿ ತೆಗೆದುಕೊಂಡ ವರದಿ, ಅಧಿಕಾರಿಗಳ ಕರ್ತವ್ಯನಿಷ್ಠೆ–ಕಾಳಜಿಗೆ ಉದಾಹರಣೆಯಂತಿದೆ. ಪ್ರಜೆಗಳ ಹಿತಾಸಕ್ತಿ ಬಗ್ಗೆ ಯೋಚಿಸಬೇಕಾದ ಪ್ರಜಾ ಪ್ರತಿನಿಧಿಗಳು, ಷೋ ರೂಂಗಳಲ್ಲಿನ ಗೊಂಬೆಗಳಂತೆ 'ಮಾರಾಟ ಬೆಲೆ'ಯ ಟ್ಯಾಗ್ ತಗುಲಿಸಿಕೊಂಡಿರುವ ಸುದ್ದಿ ವಿಧಾನಸಭೆಯಲ್ಲಿ ಎಬ್ಬಿಸಿದ ಕೋಲಾಹಲ ಇನ್ನೂ ತಣ್ಣಗಾಗಿಲ್ಲ. ಹೀಗೆ, ರಾಜಕಾರಣ ಮತ್ತು ಕಾರ್ಯಾಂಗ ಎರಡೂ ವಿಸ್ಮೃತಿಗೆ ಒಳಗಾಗಿರುವ ಸಂದರ್ಭದಲ್ಲಿ 'ಜಲ ವರ್ಷ' ಯೋಜನೆಯನ್ನು ದಡ ಮುಟ್ಟಿಸುವ ಕೆಲಸವನ್ನು ಸರ್ವಶಕ್ತನಿಗೇ ಬಿಡಬೇಕೇನೋ? ಹೇಗಿದ್ದರೂ 'ಸರ್ಕಾರಿ ಕೆಲಸ ದೇವರ ಕೆಲಸ' ಎನ್ನುವುದು ನಮ್ಮ ಕಾರ್ಯಾಂಗಸೌಧದಲ್ಲಿನ ಧ್ಯೇಯವಾಕ್ಯವಲ್ಲವೇ?

ನಾಡು, ಕಾಡು, ಗಡಿ – ಇವೆಲ್ಲವೂ ಪರಸ್ಪರ ತಳಕು ಹಾಕಿಕೊಂಡ ಸಂಗತಿಗಳು. ನಾಡು–ಕಾಡುಗಳಲ್ಲಿ ಪ್ರಾಕೃತಿಕ ಬರಗಾಲ ಉಂಟಾಗಬಹುದು. ಆದರೆ, ಮಾನವೀಯತೆಗೆ ಕ್ಷಾಮ ಉಂಟಾದರೆ ಮನುಕುಲಕ್ಕೇ ಅಪಾಯ. ಈ ಎಚ್ಚರವನ್ನು ಸದಾ ಜಾಗೃತವಾಗಿರಿಸಿಕೊಂಡರೆ ಗಡಿಯಲ್ಲಿನ ಸಂಘರ್ಷಕ್ಕೂ ಉತ್ತರ ದೊರೆತೀತು.

■ ರಘುನಾಥ ಚ.ಹ.



ಈಶ್ವರ